





ವಿಕಸಿತಗೊಳಿಸುವ ಈ ಪ್ರವಾಸಗಳು ಯಾವುದೋ ಜಂಜಡಗಳಲ್ಲಿ, ನೆಮ್ಮದಿಯ ಪಸೆಯೇ ಇಲ್ಲದೆ ಕಳೆದುಹೋಗಿರುವಾಗ ಕೈಹಿಡಿದು ಮುನ್ನಡೆಸುವ ಗುರುವಿನಂತೆ. ಬದುಕಿಗೆ ಬೇಕಾದ ಪ್ರೀತಿ, ಉಲ್ಲಾಸ, ಧೈರ್ಯ, ಮಾನಸಿಕ ಸ್ಥೈರ್ಯ, ಲೋಕಾನುಭವ, ತಾಳ್ಮೆ, ನೆಮ್ಮದಿ, ಭರವಸೆ, ಆತ್ಮವಿಶ್ವಾಸ ಹೀಗೆ ಎಲ್ಲವನ್ನೂ ನೀಡುವ ಈ ಮಳೆಗಾಲದ ಪ್ರವಾಸ ನಮ್ಮೊಳಗೆ ಹೊಸ ಕನಸುಗಳ ರೆಕ್ಕೆ ಮೂಡಿಸುತ್ತದೆ. ಬೀಳುವ ಮಳೆಗೆ ಏಳುವ ಹೂವುಗಳಂತೆ ಹೊಸ ಮೂಡ್ ಮೂಡಿಸಿ ಈ ಮಳೆಗಾಲಕ್ಕೆ ಎಲ್ಲಾದ್ರೂ ತಿರುಗಾಟ ಮಾಡಬೇಕು ಎಂದು ಮೈಮನಸ್ಸಿಗೆ ಹಿತವಾದ ತಂಗಾಳಿ ಬೀಸಿ ಪ್ರೇರೇಪಿಸುತ್ತದೆ ಈ ಮಳೆಗಾಲ.

## ಮಳೆ ಪ್ರವಾಸದ ಪ್ರೀತಿ, ಒಂದೊಂದು ರೀತಿ

ಮಳೆಗೊಂದು ಜಾಲಿರೈಡ್ ಮಾಡಿಕೊಂಡು, ದೂರ ಎಲ್ಲಾದ್ರೂ ಬೈಕೇರಿ ಹೋಗಿಬಿಡಬೇಕು, ಅದೊಂದು ಥ್ರಿಲ್ಲಿಂಗ್ ಅನುಭವ, ಎಂದು ಮಳೆ ಬಂದ ಕೂಡಲೇ ರೈನ್‌ಕೋಟು ಏರಿಸಿ ಸುಯ್ಯನೇ ಬೈಕೇರಿ ಹೋಗುವ ಯುವ ಮನಸ್ಸುಗಳ ನೂರಾರು ವಿಡಿಯೊಗಳು, ರೀಲ್ಸ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಲೆಕ್ಕವಿಲ್ಲದಷ್ಟಿದೆ. ಇವರಲ್ಲಿ ಅರ್ಧದಷ್ಟು ಜನರಿಗೆ ಮಳೆಯ ಪ್ರವಾಸವೆಂದರೆ ಆ ಕ್ಷಣದ ರೋಮಾಂಚನ; ತಮ್ಮ ಪ್ರವಾಸವನ್ನು ಬೇರೆಯವರಿಗೂ ತೋರಿಸಿ ಆನಂದಪಡಿಸುವ ಒಂದು ಫ್ಯಾಷನ್; ತಾವು ಪ್ರವಾಸ ಮಾಡಿದ ವಿಡಿಯೊ, ರೀಲ್ಸ್ ನೋಡಿ ವೀವ್ಸ್ ಆದರೆ ಅಲ್ಲಿಗವರ